# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1409

2) ಮಾನ್ಯ ಸದಸ್ಯರ ಹೆಸರು : ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

3) ಉತ್ತರಿಸುವ ದಿನಾಂಕ : 18.12.2025

4) ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಐದು ವರ್ಷಗಳಲ್ಲಿ ಜಿಲ್ಲಾ ಪೊಲೀಸ್, ಆಯುಕ್ತಾಲಯಗಳ ಹಾಗೂ ವಿಶೇಷ ಪೊಲೀಸ್ ಘಟಕಗಳಿಗೆ ಸೇರಿದ ಎಷ್ಟು ಪೊಲೀಸ್ ವಾಹನಗಳು ಅಪಘಾತಗಳಿಗೆ ಒಳಗಾಗಿವೆ; ಯಾವ ಕಾರಣಗಳಿಂದ ಅಪಘಾತವಾಗಿದೆ: (ಸಂಪೂರ್ಣ ಮಾಹಿತಿ ನೀಡುವುದು) | ಕಳೆದ ಐದು ವರ್ಷಗಳಲ್ಲಿ ಜಿಲ್ಲಾ ಪೊಲೀಸ್, ಆಯುಕ್ತಾಲಯಗಳ ಹಾಗೂ ವಿಶೇಷ ಪೊಲೀಸ್ ಘಟಕಗಳಿಗೆ ಸೇರಿದ ಒಟ್ಟು 439 ವಿವಿಧ ಮಾದರಿಯ ಪೊಲೀಸ್ ವಾಹನಗಳು ಅಪಘಾತಕ್ಕೀಡಾಗಿರುತ್ತವೆ.<br><br>ಸದರಿ ವಾಹನಗಳು ರಸ್ತೆ ಅಪಘಾತಗಳಲ್ಲಿ/ ಗಲಭೆಗಳಲ್ಲಿ/ ಮರದ ಕೊಂಬೆಗಳು ಬಿದ್ದು ಮತ್ತು ಇತರ ಕಾರಣಗಳಿಂದ ವಾಹನಗಳು ಜಖಂ/ ಅಪಘಾತಕ್ಕೀಡಾಗಿರುತ್ತವೆ. |
| ಆ) | ಜಿಲ್ಲಾ ಪೊಲೀಸ್, ಆಯುಕ್ತಾಲಯಗಳ ಹಾಗೂ ವಿಶೇಷ ಘಟಕಗಳಲ್ಲಿ ಪೊಲೀಸ್ ವಾಹನಗಳ ನಿರ್ವಹಣೆಯ ಜವಾಬ್ದಾರಿಯನ್ನು ವಹಿಸಿರುವ MTO ಅಧಿಕಾರಿಗಳು ಯಾವ ವಿಭಾಗಗಳಿಗೆ ಸೇರಿರುತ್ತಾರೆ; ಅಲ್ಲದೇ MTO ಹುದ್ದೆಗೆ ಯಾವುದಾದರೂ ವಿಶೇಷ ತರಬೇತಿ ನೀಡಲಾಗುತ್ತದೆಯೇ ಇದ್ದಲ್ಲಿ ಕಳೆದ 5 ವರ್ಷಗಳಲ್ಲಿ ಎಷ್ಟು ಅಧಿಕಾರಿಗಳು ಈ ತರಬೇತಿಯನ್ನು ಪಡೆದಿದ್ದಾರೆ; (ಮಾಹಿತಿ ನೀಡುವುದು) | ಆಯಾ ಜಿಲ್ಲೆ/ ವಿಭಾಗ/ ಆಯುಕ್ತಾಲಯಗಳಿಗೆ ಸೇರಿರುವ ವಾಹನಗಳನ್ನು ಆಯಾ ಘಟಕದ ಡಿ.ವೈ.ಎಸ್‌ಪಿ / ಇನ್ಸ್ ಪೆಕ್ಟರ್/ ಆರ್‌ಎಸ್‌ಐ/ ಪಿಎಸ್ ಐ ದರ್ಜೆಯ ಅಧಿಕಾರಿಗಳು ಎಂ.ಟಿ.ಓರವರುಗಳಾಗಿ ವಾಹನಗಳ ನಿರ್ವಹಣೆಯನ್ನು ಮಾಡುತ್ತಿರುತ್ತಾರೆ.<br><br>ಕಳೆದ 5 ವರ್ಷಗಳಲ್ಲಿ 233 ಅಧಿಕಾರಿಗಳು ಪಿ.ಡಿ.ಎಂ.ಎಸ್. ಯಲಹಂಕ ವಾಹನ ತರಬೇತಿ ಶಾಲೆಯಿಂದ ಎಂ.ಟಿ.ಓ ತರಬೇತಿಯನ್ನು ಪಡೆದಿರುತ್ತಾರೆ. |
| ಇ) | ಒಂದು MTO ಹುದ್ದೆಯನ್ನು ಎಷ್ಟು ವಾಹನಗಳ ನಿರ್ವಹಣೆಗೆ ನಿಗದಿಪಡಿಸಲಾಗಿದೆ, ಹಾಗೂ ಈ ಕುರಿತು ಅನುಸರಿಸುವ ಮಾನದಂಡವನ್ನು ತಿಳಿಸುವುದು? | ಆಯಾ ಜಿಲ್ಲೆ/ ವಿಭಾಗ/ ಆಯುಕ್ತಾಲಯಗಳಿಗೆ ಸೇರಿರುವ ಎಲ್ಲಾ ವಾಹನಗಳನ್ನು ಸಾಮಾನ್ಯವಾಗಿ ಪೊಲೀಸ್ ಅಧಿಕಾರಿಗಳು ಎಂಟಿಓ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ವಿಶೇಷ ಘಟಕಗಳಲ್ಲಿ ಮಾತ್ರ ಆಯಾ ಘಟಕಗಳ, ತರಬೇತಿ ಪಡೆದ ಅಧಿಕಾರಿಗಳು ವಾಹನಗಳ ನಿರ್ವಹಣೆಯನ್ನು ಮಾಡುತ್ತಿರುತ್ತಾರೆ. |
| ಈ) | ಬೆಂಗಳೂರು ನಗರ ಪೊಲೀಸ್ ಆಯುಕ್ತಾಲಯದ ವ್ಯಾಪ್ತಿಯಲ್ಲಿ ಒಟ್ಟು ಎಷ್ಟು ಪೊಲೀಸ್ ವಾಹನಗಳಿವೆ; ಅವುಗಳಿಗೆ ಎಷ್ಟು MTO ಅಧಿಕಾರಿಗಳು ಯಾವ ಯಾವ ವಿಭಾಗಗಳಿಗೆ ಸೇರಿದವರು ಎಂಬುದನ್ನು ವಿಭಾಗವಾರು ಮಾಹಿತಿ ನೀಡುವುದು; | ಬೆಂಗಳೂರು ನಗರ ಪೊಲೀಸ್ ಆಯುಕ್ತಾಲಯದ ವ್ಯಾಪ್ತಿಯಲ್ಲಿ ಒಟ್ಟು 3116 ವಿವಿಧ ಮಾದರಿಯ ವಾಹನಗಳು ಇರುತ್ತವೆ. ಸದರಿ ವಾಹನಗಳ ನಿರ್ವಹಣೆಯನ್ನು ಸಂಬಂಧಪಟ್ಟ ವಿಭಾಗದ ಎಂ.ಟಿ.ಓರವರುಗಳು ಹಾಗೂ ಅವರ ಅಧೀನದಲ್ಲಿರುವ ಎ.ಎಂ.ಟಿ.ಓ ಅಧಿಕಾರಿಗಳು ನಿರ್ವಹಿಸುತ್ತಿದ್ದು, ವಿಭಾಗವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |

| | | |
|---|---|---|
| ಉ) | ಬೆಂಗಳೂರು ನಗರ ಪೊಲೀಸ್ ಆಯುಕ್ತಾಲಯ ಮತ್ತು ವಿಶೇಷ ಪೊಲೀಸ್ ಘಟಕಗಳನ್ನು ಒಳಗೊಂಡಂತೆ MTO ತರಬೇತಿ ಪಡೆದ CAR/DAR ವಿಭಾಗದ ಅಧಿಕಾರಿಗಳು ಲಭ್ಯವಾಗಿದ್ದರೂ MTO ತರಬೇತಿ ಪಡೆಯದ ಬೇರೆ ವಿಭಾಗಗಳ ಅಧಿಕಾರಿಗಳನ್ನು MTO ಹುದ್ದೆಗೆ ನೇಮಿಸಲಾಗಿದೆಯೇ, ನೇಮಿಸಿದ್ದಲ್ಲಿ ಕಾರಣಗಳೇನು? | ಬೆಂಗಳೂರು ನಗರ ಪೊಲೀಸ್ ಆಯುಕ್ತಾಲಯ ಮತ್ತು ವಿಶೇಷ ಪೊಲೀಸ್ ಘಟಕಗಳಲ್ಲಿ ಸಿ.ಎ.ಆರ್/ಡಿ.ಎ.ಆರ್‌ಗೆ ಸೇರಿದ ಪೊಲೀಸ್ ಅಧಿಕಾರಿಗಳು ಎಂ.ಟಿ.ಓ ಕರ್ತವ್ಯವನ್ನು ನಿರ್ವಹಿಸುತ್ತಿರುತ್ತಾರೆ. ಕೆಲವು ವಿಶೇಷ ಘಟಕಗಳಲ್ಲಿ ಮಾತ್ರ ಆಯಾ ಘಟಕಗಳ, ತರಬೇತಿ ಪಡೆದ ಅಧಿಕಾರಿಗಳು ಎಂ.ಟಿ.ಓ. ಕರ್ತವ್ಯವನ್ನು ನಿರ್ವಹಿಸುತ್ತಿರುತ್ತಾರೆ. |

**ಸಂಖ್ಯೆ:ಹೆಚ್‌ಡಿ 38 ಇಎಂವಿ 2025**

**(ಡಾ|| ಜಿ. ಪರಮೇಶ್ವರ)**
ಗೃಹ ಸಚಿವರು

# ಅನುಬಂಧ

| ಕ್ರ.ಸಂ | ವಿಭಾಗ | ಬೆಂಗಳೂರು ನಗರ ಪೊಲೀಸ್ ಆಯುಕ್ತಾಲಯದ ವ್ಯಾಪ್ತಿಯಲ್ಲಿ ಒಟ್ಟು ಎಷ್ಟು ಪೊಲೀಸ್ ವಾಹನಗಳಿವೆ; | ಅವುಗಳಿಗೆ ಎಷ್ಟು MTO ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ? | ಹಾಗೂ MTO ಕರ್ತವ್ಯ ವಹಿಸಿರುವ ಅಧಿಕಾರಿಗಳು ಯಾವ ಯಾವ ವಿಭಾಗಗಳಿಗೆ ಸೇರಿದವರು ಎಂಬುದನ್ನು ವಿಭಾಗವಾರು ಮಾಹಿತಿ ನೀಡುವುದು; |
|---|---|---|---|---|
| 01 | ಸಿಎಆರ್(ಕೇಂದ್ರ) | 415 | 1 | ಆರ್‌ಪಿಐ, ಸಿಎಆರ್(ಕೇಂದ್ರ) |
| 02 | ಸಿಎಆರ್(ದಕ್ಷಿಣ) | 80 | 1 | ಆರ್‌ಪಿಐ, ಸಿಎಆರ್(ದಕ್ಷಿಣ) |
| 03 | ಸಿಎಆರ್ (ಉತ್ತರ) | 49 | 1 | ಆರ್‌ಪಿಐ, ಸಿಎಆರ್ (ಉತ್ತರ) |
| 04 | ಸಿಎಆರ್(ಪಶ್ಚಿಮ) | 50 | 1 | ಆರ್‌ಪಿಐ, ಸಿಎಆರ್(ಪಶ್ಚಿಮ) |
| 05 | ಪೂರ್ವ ವಿಭಾಗ | 219 | 1 | ಪಿಐ, ಸಿವಿಲ್, ಪೂರ್ವ ವಿಭಾಗ |
| 06 | ಪಶ್ಚಿಮ ವಿಭಾಗ | 266 | 1 | ಆರ್‌ಎಸ್‌ಐ, ಸಿಎಆರ್(ಕೇಂದ್ರ) |
| 07 | ದಕ್ಷಿಣ ವಿಭಾಗ | 211 | 1 | ಪಿಐ, ಸಿವಿಲ್, ದಕ್ಷಿಣ ವಿಭಾಗ |
| 08 | ಉತ್ತರ ವಿಭಾಗ | 231 | 1 | ಪಿಐ, ಸಿವಿಲ್, ಉತ್ತರ ವಿಭಾಗ |
| 09 | ಆಗ್ನೇಯ ವಿಭಾಗ | 229 | 1 | ಆರ್‌ಎಸ್‌ಐ, ಸಿಎಆರ್(ಕೇಂದ್ರ) |
| 10 | ಈಶಾನ್ಯ ವಿಭಾಗ | 160 | 1 | ಪಿಎಸ್‌ಐ, ಸಿವಿಲ್, ಈಶಾನ್ಯ ವಿಭಾಗ |
| 11 | ಸಂಚಾರ ಪೂರ್ವ ವಿಭಾಗ | 178 | 1 | ಪಿಐ, ಸಿವಿಲ್, ಸಂಚಾರ ಪೂರ್ವ ವಿಭಾಗ |
| 12 | ಸಂಚಾರ ಪಶ್ಚಿಮ ವಿಭಾಗ | 184 | 1 | ಪಿಐ, ಸಿವಿಲ್, ಸಂಚಾರ ಪಶ್ಚಿಮ ವಿಭಾಗ |
| 13 | ಸಂಚಾರ ಉತ್ತರ ವಿಭಾಗ | 126 | 1 | ಪಿಐ, ಸಿವಿಲ್, ಸಂಚಾರ ಉತ್ತರ ವಿಭಾಗ |
| 14 | ಸಂಚಾರ ದಕ್ಷಿಣ ವಿಭಾಗ | 145 | 1 | ಪಿಐ, ಸಿವಿಲ್, ಸಂಚಾರ ದಕ್ಷಿಣ ವಿಭಾಗ |
| 15 | ಕೇಂದ್ರ ವಿಭಾಗ | 220 | 1 | ಪಿಐ, ಸಿವಿಲ್, ಕೇಂದ್ರ ವಿಭಾಗ |
| 16 | ವೈಟ್‌ಫೀಲ್ಡ್ ವಿಭಾಗ | 139 | 1 | ಪಿಐ, ಸಿವಿಲ್, ವೈಟ್‌ಫೀಲ್ಡ್ ವಿಭಾಗ |
| 17 | ಸಿಸಿಬಿ | 96 | 1 | ಎಸಿಪಿ, ಸಿವಿಲ್, ಸಿಸಿಬಿ |
| 18 | ವಿವಿಐಪಿ ವಿಭಾಗ | 89 | 1 | ಆರ್‌ಪಿಐ, ವಿವಿಐಪಿ ವಿಭಾಗ |
| 19 | ವಿಧಾನಸೌಧ ಭದ್ರತೆ | 29 | 1 | ಆರ್‌ಪಿಐ, ವಿಧಾನಸೌಧ ಭದ್ರತೆ |
| ಒಟ್ಟು | | 3116 | 19 | |